# ಪರಿಸರದ ಅರಿವಿಗೆ ರಂಗಭೂಮಿಯ ಆಸರೆ

ರಾಜ್‌ಕುಮಾರ್ ರಜಕ್

ರಂಗಕಲೆಯು ತರಗತಿಯೊಳಗೆ ಎಲ್ಲರನ್ನೂ ಒಳಗೊಳ್ಳುವ ಒಂದು ವಾತಾವರಣವನ್ನು ನಿರ್ಮಿಸುವುದರೊಂದಿಗೆ, ಮಾಡುತ್ತಾ ಕಲಿಯುವುದನ್ನು (learning-by-doing) ಸುಗಮಗೊಳಿಸಲು ಇರುವ ಒಂದು ಶಕ್ತಿಯುತ ಮಾಧ್ಯಮವಾಗಿದೆ. ಒಂದು ಮಗು ಸ್ವತಃ ಏನನ್ನಾದರೂ ಸಾಧಿಸುತ್ತದೆಯೋ ಆಗ ಸಾಮಾಜಿಕ ಜೀವನದ ವಿಷಯಗಳೊಂದಿಗೆ ತೊಡಗಿಸಿಕೊಳ್ಳುವ ಪ್ರಯತ್ನದ ಭಾಗವಾಗಿ ಅದು ತನ್ನದೇ ವಿಶಿಷ್ಟ ರೀತಿಯಲ್ಲಿ ತನ್ನನ್ನು ಅಭಿವ್ಯಕ್ತಿಗೊಳಿಸಿಕೊಳ್ಳುತ್ತದೆ. ನಾಟಕವೆಂದರೆ ತನ್ನದೇ ವೈಯಕ್ತಿಕ ಹಿನ್ನೆಲೆಯಿಂದ ಸನ್ನಿವೇಶಗಳ ಒಳಹೊಕ್ಕು ತನ್ನದೇ ಕಲ್ಪನೆಗಳಿಗೆ ಅದನ್ನು ಹೊಂದಿಸಿ ವಾಸ್ತವ ಜಗತ್ತಿನಲ್ಲಿ ಆ ಸಂಬಂಧಗಳನ್ನು ಅನ್ವಯಿಸುವುದು. ಪರಿಸರ ಅಧ್ಯಯನದ ವಿಷಯ 'ಪಾಂಡ್ ಇನ್‌ದ ಕ್ಲಾಸ್ ರೂಮ್' ಬಗ್ಗೆ ಕೆಲಸ ಮಾಡುವಾಗ ನಮಗೆ ಇದು ನಿಚ್ಚಳವಾಯಿತು. ಗ್ರಾಮದಲ್ಲಿನ ಕೊಳವೊಂದರ ನಿರ್ವಹಣೆಯಲ್ಲಿ ಸಾಮಾಜಿಕ ಮತ್ತು ಆಡಳಿತಾತ್ಮಕ ಸಂಸ್ಥೆಗಳ ಮತ್ತು ನಾಗರೀಕರ ಪಾತ್ರ ಹಾಗೂ ಜವಾಬ್ದಾರಿಗಳನ್ನು ಪಾತ್ರಾಭಿನಯದ ಮೂಲಕ ಮಕ್ಕಳು ವಿಚಾರಣೆ ನಡೆಸಿದರು. ನಾಲ್ಕನೇ ತರಗತಿಯ ಒಂದು ಯೋಜನೆಯ ಮಾದರಿಯು ಇಲ್ಲಿದೆ. ಸ್ಥಳೀಯ ನೀರಿನ ಮೂಲವಾದ ಕೊಳದ ಬಗ್ಗೆ ಇಲ್ಲಿ ಅಭಿನಯಿಸಲಾಗಿದೆ. ಈ ಚಟುವಟಿಕೆಯಲ್ಲಿ ಕೆಳಗಿನ ಅಂಶಗಳನ್ನು ಪರಿಶೀಲಿಸಲಾಗಿದೆ.

1. ನೀರಿನ ಲಭ್ಯತೆ ಮತ್ತು ಅದರ ವಿತರಣೆಯನ್ನು ಒಂದು ಮೂಲ ಅಗತ್ಯವಾಗಿ ಗುರುತಿಸುವುದು

2. ತಮ್ಮ ನೆರೆಹೊರೆಯಲ್ಲಿ ಒಂದು ಕೊಳದ (ನೀರಿನ ಮೂಲ) ಅಗತ್ಯತೆಯನ್ನು ಅರಿಯುವುದು ಮತ್ತು ಅದರ ಸಮಾಜೋ ಸಾಂಸ್ಕೃತಿಕ ಹಿನ್ನೆಲೆ (socio-cultural Context)

## ಪೂರ್ವಾನುಭವದ ಅಡಿಪಾಯ

ರಂಗಚಟುವಟಿಕೆಯ ಆಟಗಳಿಗೆ ಮಕ್ಕಳು ಈ ಹಿಂದೆಯೇ ಪರಿಚಿತರಾಗಿದ್ದರು ಮತ್ತು ಸ್ಥಳೀಯ ಘಟನೆಗಳನ್ನು ಉತ್ತಮಪಡಿಸಿ, ಅದನ್ನು ಅಭಿನಯಿಸಿ, ಸಣ್ಣಪುಟ್ಟ ಘಟನೆಗಳಿಂದ ಹೇಗೆ ನಾಟಕಗಳನ್ನು ಕಟ್ಟಬಹುದು ಎಂದು ಈ ಮಕ್ಕಳು ತಿಳಿದಿದ್ದರು. ಸಣ್ಣಕಥೆಗಳನ್ನು ವಿವಿಧ ಸನ್ನಿವೇಶಗಳನ್ನಾಗಿ ವಿಭಜಿಸಿ ಅವನ್ನು ಸ್ಥಿರ ಚಿತ್ರಗಳನ್ನಾಗಿ ಅವರು ಪ್ರದರ್ಶಿಸಬಲ್ಲವರಾಗಿದ್ದರು. ಅವರು ಸಣ್ಣ ಮತ್ತು ದೊಡ್ಡ ಗುಂಪುಗಳಲ್ಲಿ ಕೆಲಸ ಮಾಡಿದ್ದಾರೆ. ಹಾಗಾಗಿ ಕೊಳದ ವಿಷಯದಲ್ಲಿ ಕೆಲಸ ಮಾಡುವಾಗ ಈ ಕೌಶಲವು ಬಹಳ ಉಪಯೋಗಕ್ಕೆ ಬಂದಿತು.

## ಕ್ರಿಯಾ ಯೋಜನೆ

ಹಲವಾರು ಸೆಷನ್‌ಗಳಲ್ಲಿ ಸಂಗ್ರಹಿಸಿದ ಅನುಭವಗಳು ಮತ್ತು ಹಂತಗಳನ್ನು ಇಲ್ಲಿ ನೀಡಲಾಗಿದೆ.

## ಚಟುವಟಿಕೆಯ ಅವಧಿ 1

ಏನು : ನೀರಿನ ಮೂಲದ ಪರಾಮರ್ಶೆಯನ್ನು ಒಂದು ಸಂದರ್ಭದ ಹಿನ್ನೆಲೆಯಲ್ಲಿ ಮಾಡುವುದು

ಏಕೆ : ಸ್ಥಳೀಯ ನೀರಿನ ಸರಬರಾಜು ಜೊತೆಗೆ ವಿತರಣೆ ಮತ್ತು ಲಭ್ಯತೆಯ ಪ್ರಕ್ರಿಯೆಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವುದು ಹಾಗೂ ಇವೆರಡರ ಬಗ್ಗೆಯೂ ಅವರು ಕೆಲಸ ಮಾಡುವಂತೆ ಹುರಿದುಂಬಿಸುವುದು. ಆ ಮೂಲಕ ಅವರು ಸ್ಥಳೀಯ ಸಾಮಾಜಿಕ ಹಿನ್ನೆಲೆಯಲ್ಲಿ ಅಲ್ಲಿನ ಜಟಿಲತೆಗಳನ್ನು ಮತ್ತು ಅದಕ್ಕೆ ಹೊಂದಿಕೊಂಡ ಸಮಸ್ಯೆಗಳನ್ನು ಕಂಡುಕೊಳ್ಳುವುದು.

ಹೇಗೆ :

1. ಸರ್ಕಲ್ ಟೈಮ್‌ನಲ್ಲಿ ಅಥವಾ ಅಂತಹುದೇ ಮತ್ತೊಂದು ಸಮಯದಲ್ಲಿ ಗುಂಪು ಸಂವಾದವನ್ನು ಆರಂಭಿಸುವುದು. ಅದರಲ್ಲಿ, ನಮ್ಮ ಮನೆಗಳಿಗೆ ಉಪಯೋಗಿಸಲು ಬೇಕಾದ ನೀರನ್ನು ಯಾರು ತರುತ್ತಾರೆ ಮತ್ತು ಅದು ಎಲ್ಲಿಂದ ಬರುತ್ತದೆ ಎಂಬ ವಿಷಯವನ್ನು ಚರ್ಚಿಸುವುದು. ಕಾಗದದ ಹಾಳೆಯಲ್ಲಿ ಅದರ ಸರಳವಾದ ನಕ್ಷೆ ಮತ್ತು ಚಿತ್ರವನ್ನು ರಚಿಸುವುದು.

2. ಈ ವಿಷಯದ ಬಗ್ಗೆ ಮಕ್ಕಳ ಜೊತೆಗೆ ಮತ್ತೊಂದು ಗುಂಪು ಸಂವಾದವನ್ನು ಆಯೋಜಿಸುವುದು ಮತ್ತು ಈ ಸಲ ನಮ್ಮ ಮನೆಗಳಿಗೆ ನೀರು ಎಲ್ಲಿಂದ ಬರುತ್ತದೆ ಮತ್ತು ಕುಟುಂಬದ ಅದೇ ನಿರ್ದಿಷ್ಟ ವ್ಯಕ್ತಿಯೇ ಏಕೆ ನೀರನ್ನು ತರಲು ಹೋಗುತ್ತಾರೆ? ಎಂಬ ವಿಷಯದ ಚರ್ಚೆಗೆ ಗಮನ ಹರಿಸುವುದು.

3. ಮಕ್ಕಳು ರಚಿಸಿರುವ ನಕ್ಷೆ ಮತ್ತು ಚಿತ್ರಗಳ ಬಗ್ಗೆ ತರಗತಿಯಲ್ಲಿ ಸಂವಾದ ನಡೆಸುವುದು.

4. ಹಳ್ಳಿಯ ನೀರಿನ ಮೂಲಗಳ ಪಟ್ಟಿ ರಚಿಸುವುದು

5. ಆ ಪಟ್ಟಿಯಲ್ಲಿ 'ಕೊಳ' ಎಂಬ ಪದವನ್ನು ಗುರುತು ಮಾಡಿ ಮಕ್ಕಳು ತಮ್ಮ ಕುಟುಂಬದ ಸದಸ್ಯರೊಂದಿಗೆ ಮತ್ತು ಸ್ಥಳೀಯ ನಾಗರೀಕರೊಂದಿಗೆ ಅದರ ಬಗ್ಗೆ ಮಾತನಾಡಿ ಹೆಚ್ಚು ವಿಷಯಗಳನ್ನು ತಿಳಿಯಲು ಹೇಳುವುದು.

## ಫಲಿತಾಂಶಗಳು

1. ಮಕ್ಕಳೊಂದಿಗೆ ಮಾತನಾಡಿ ಮತ್ತು ಕಪ್ಪು ಹಲಗೆಯ ಮೇಲೆ ಆ ಪಟ್ಟಿಯನ್ನು ಬರೆದು ಹಲವಾರು ಅನುಮಾನಗಳನ್ನು ಪರಿಹರಿಸಲಾಯಿತು.

ಕೆಲವು ಪ್ರಶ್ನೆಗಳು ಹೀಗಿದ್ದವು: ನೀರಿನ ಮೂಲ ಎಂದರೆ ಏನು? ಈ ಪ್ರಶ್ನೆಗೆ ಬಂದ ಉತ್ತರದಿಂದ ಕೆಲವು ಕುಟುಂಬಗಳು ಹೊರಗಡೆಯಿಂದ ನೀರನ್ನು ತರಬೇಕಾಗಿಲ್ಲ ಏಕೆಂದರೆ ಅವರು ಮನೆಯಲ್ಲೇ ಕೊಳವೆಬಾವಿಯನ್ನು ಹೊಂದಿದ್ದಾರೆ ಮತ್ತು ಉಳಿದ ಬಹಳಷ್ಟು ಮಂದಿ ನೀರಿನ ಟ್ಯಾಂಕುಗಳಿಂದ ನೀರನ್ನು ತರುತ್ತಾರೆ ಎಂದು ತಿಳಿದು ಬಂದಿತು. ಮತ್ತೆ ಹಲವು ಮಕ್ಕಳು ತಮ್ಮ ಮನೆಗೆ ನೀರನ್ನು ದೂರದಿಂದ ತರಲಾಗುತ್ತದೆ ಮತ್ತು ಸಾಮಾನ್ಯವಾಗಿ ಈ ಕೆಲಸವನ್ನು ಅವರ ತಾಯಿ ಅಥವಾ ಸಹೋದರಿಯರು ಮಾಡುತ್ತಾರೆ ಎಂದು ತಿಳಿಸಿದರು. ಇದು ಮತ್ತೊಂದು ಚರ್ಚೆಗೆ ಅನುವು ಮಾಡಿಕೊಟ್ಟಿತು. ನೀರನ್ನು ತರುವುದು ಏಕೆ ತಾಯಿಯ ಮತ್ತು ಸಹೋದರಿಯರ ಜವಾಬ್ದಾರಿ? ಇದಕ್ಕೆ ಉತ್ತರವು ಒಂದೋ ತಂದೆಯು ಕೆಲಸಕ್ಕೆ ಹೋಗುತ್ತಾರೆ ಎಂದೋ ಅಥವಾ ತಾಯಿಯು ಅಡುಗೆ ಮಾಡುತ್ತಾರಾದ್ದರಿಂದ ಹೆಚ್ಚಾಗಿ ಆಕೆಯೇ ನೀರನ್ನು ತರುತ್ತಾರೆ ಎಂದಾಗಿದ್ದಿತು. ಇಂತಹ ಉತ್ತರಗಳಿಂದ ಮನೆಯ ಬಗೆಗಿನ ಮಕ್ಕಳ ದೃಷ್ಟಿಕೋನವನ್ನು ಅರ್ಥ ಮಾಡಿಕೊಂಡೆವು, ಮುಂದೆ ಇದರ ಬಗ್ಗೆ ಮತ್ತಷ್ಟು ವಿವರವಾಗಿ ಕೆಲಸ ಮಾಡಬಹುದು.

## ಚಟುವಟಿಕೆಯ ಅವಧಿ 2

ಏನು : ಹಳ್ಳಿ ಮತ್ತು ಅದರ ನೀರಿನ ಮೂಲ ( ಕೊಳ ) ಇವುಗಳ ನಡುವಿನ ಸಂಬಂಧದ ಅರಿವು

ಏಕೆ: ಹಳ್ಳಿಯ ನಾಗರೀಕರ ಕಾಳಜಿಗಳು ಮತ್ತು ಸೂಚಿತ ಪರಿಹಾರಗಳೂ ಸೇರಿದಂತೆ ಸ್ಥಳೀಯ ಕೊಳದ ಜೊತೆಗೆ ಅವರ ಸಂಬಂಧಗಳು

ಹೇಗೆ: ಮಕ್ಕಳು ಕೊಳಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಮತ್ತು ಕಾಳಜಿಗಳನ್ನು ಗುರುತಿಸಿ ಮಾತನಾಡುವುದನ್ನು ಕೇಳಿಸಿಕೊಳ್ಳುವುದು. ರಂಗಭೂಮಿ ಚಟುವಟಿಕೆಯ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುವುದು

ಶಿಕ್ಷಕಿಯು ಕೊಳದ ಬಗೆಗಿನ ಈ ಕಥೆಯನ್ನು ಮತ್ತೆ ಹೇಳಿದರು: ಆರ್ನಿಯಾ ಎಂಬ ಹಳ್ಳಿಯಲ್ಲಿ ಒಂದು ಹಳೆಯ ಕೊಳವಿದೆ. ಸುತ್ತಮುತ್ತಲ ಪ್ರದೇಶಗಳಿಂದ ಬರುವ ತ್ಯಾಜ್ಯಗಳಿಂದ ಈ ಕೊಳವು ಕಲುಷಿತಗೊಳ್ಳುತ್ತಿದ್ದು ಕೊಳವು ಚಿಕ್ಕದಾಗುತ್ತಿದೆ. ಇದರಿಂದಾಗಿ ಜಾನುವಾರುಗಳಿಗೆ ಕುಡಿಯಲು ಸಾಕಷ್ಟು ನೀರು ಸಿಗುತ್ತಿಲ್ಲ ಮತ್ತು ಭೂಮಿ ಒಣಗುತ್ತಿದೆ. ಕೊಳದ ಈ ಸ್ಥಿತಿಯನ್ನು ಗಮನಿಸಿದ ಸೋಫಿಯಾ ಎಂಬ ಹೆಂಗಸು ಸರಪಂಚರಿಗೆ ಹಲವು ಬಾರಿ ದೂರು ನೀಡಿ ಆಕೆಯ ಆಡುಗಳು ಮತ್ತು ಇತರರ ಜಾನುವಾರುಗಳು ನೀರು ಕುಡಿಯಲು ಆ ಕೊಳವನ್ನು ಚೊಕ್ಕಟಗೊಳಿಸಬೇಕು ಮತ್ತು ಕೊಳವನ್ನು ಚೊಕ್ಕಟವಾಗಿಯೇ ಕಾಪಿಟ್ಟುಕೊಳ್ಳಲು ಒಂದು ಪರಿಹಾರವನ್ನು ಹುಡುಕಿಕೊಳ್ಳಬೇಕು ಎಂದು ಹೇಳಿದರು. ಇಷ್ಟಾದರೂ ಸಮಸ್ಯೆ ಹಾಗೆಯೇ ಉಳಿಯಿತು. ಈ ಸಂಬಂಧವಾಗಿ ಸಮುದಾಯ ಭವನದಲ್ಲಿ ಒಂದು ಸಭೆಯನ್ನು ಕರೆಯಲಾಯಿತು ಮತ್ತು ಸೋಫಿಯಾರನ್ನು ಆ ಸಭೆಗೆ ಬರಲು ಸೂಚಿಸಲಾಯಿತು. ಈಗ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಿರುವುದರಿಂದ ಆ ಹಳ್ಳಿಯವರಲ್ಲಿ ಒಬ್ಬರಾಗಿ ನೀವು ಏನು ಹೇಳ ಬಯಸುತ್ತೀರಿ? ಎಲ್ಲ ಮಕ್ಕಳಿಗೂ ಹಳ್ಳಿಯವರ ಪಾತ್ರವನ್ನು ನೀಡಲಾಯಿತು. ಅವರೆಲ್ಲ ಸಣ್ಣಸಣ್ಣ ಗುಂಪುಗಳಾಗಿ ತಮ್ಮೊಳಗೆ ಚರ್ಚಿಸಿ ಸರಪಂಚರಿಗೆ ಏನು ಹೇಳಬೇಕೆಂದು ಬಯಸುತ್ತಾರೋ ಅದನ್ನು ಬರೆದು ತರಬೇಕೆಂದು ಶಿಕ್ಷಕಿಯು ತಿಳಿಸಿದರು.

ಕೆಲವು ಮಕ್ಕಳಷ್ಟೇ ಮಾತನಾಡಿದರು; ಅವರೆಲ್ಲ ನೆರೆಹೊರೆಯವರೇ ಆಗಿದ್ದರಿಂದ ವಿಷಯಗಳು ಪುನರಾವರ್ತನೆ–ಯಾದವು. ಮುಖ್ಯ ವಿಷಯಗಳು ಈ ಕೆಳಗಿನಂತಿವೆ:

1. ಹಿಂದೆ ಕೆಲವರು ಹಳ್ಳಿಯ ಈ ಕೊಳದಲ್ಲಿ ಮೀಯುತ್ತಿದ್ದರು. ಹಳ್ಳಿಯಲ್ಲಿ ಯಾರಾದರೂ ಸತ್ತಾಗ ಪ್ರತಿಯೊಬ್ಬರೂ ಕೊಳದ ಬಳಿಯ ಮರದ ಕೆಳಗೆ ನಿಲ್ಲುತ್ತಿದ್ದರು ಮತ್ತು ಹಲವರು ಕೊಳದಲ್ಲಿ ಸ್ನಾನ ಮಾಡುತ್ತಿದ್ದರು. ಈಗ ಮನೆಗಳಿಗೇ ನಲ್ಲಿಯ ನೀರು ಬರಲು ಆರಂಭಿಸಿದ ಮೇಲೆ ಈ ಆಚರಣೆಯು ಅಪರೂಪವಾಗಿದೆ. ಆದರೆ ಪ್ರಾಣಿಗಳಿಗೆ ಇದೇ ನೀರಿನ ಮೂಲವಾಗಿದೆ.

2. ಹತ್ತಿರದ ಹಳ್ಳಿಗಳಿಂದ ಕಸವನ್ನು ತಂದು ಇಲ್ಲಿ ಸುರಿಯುತ್ತಾರೆ.

3. ಕೆಲವೊಮ್ಮೆ ಸಣ್ಣಪುಟ್ಟ ಪ್ರಾಣಿಗಳು ಈ ಕೊಳದಲ್ಲಿ ಮುಳುಗಿ ಸಾಯುತ್ತಿವೆ.

ಈ ಸಭೆಯು ನಡೆಯುತ್ತಿದ್ದಾಗ ಮಕ್ಕಳ ನಡುವೆ ಗುಸುಗುಸು ನಡೆದಿತ್ತು. ಆಗ ಇಬ್ಬರು ಮಕ್ಕಳು ಸರಪಂಚರಿಗೆ ಜಾನುವಾರುಗಳು ಮತ್ತು ಮನೆಯವರು ಆಗಾಗ್ಗೆ ಆರೋಗ್ಯ ತಪ್ಪುತ್ತಿದ್ದಾರೆ, ಆದ್ದರಿಂದ ಕಸವನ್ನು ಮತ್ತೆಲ್ಲಾದರೂ ಹಾಕಬೇಕು ಮತ್ತು ಇದನ್ನು ಎಲ್ಲಾ ಹಳ್ಳಿಗರಿಗೂ ತಿಳಿಸಬೇಕು ಎಂದು ಹೇಳಿದರು.

## ಚಟುವಟಿಕೆಯ ಅವಧಿ 3

ಏನು: ಹಳ್ಳಿಗರು ಮತ್ತು ಸ್ಥಳೀಯ ಕೊಳದ ನಡುವಿರುವ ವಿಶಾಲ ಸಂಬಂಧವನ್ನು ಬಳಸಿಕೊಂಡು ಸಮಸ್ಯೆಯನ್ನು ಪರಿಹರಿಸುವುದು.

ಏಕೆ: ಹಳ್ಳಿಯ ಆಡಳಿತಾತ್ಮಕ ಮತ್ತು ವ್ಯವಸ್ಥಾತ್ಮಕ ಪ್ರಕ್ರಿಯೆಗಳ ಬಗ್ಗೆ ಪರಿಚಯ ಮಾಡಿಕೊಳ್ಳುವುದು ಮತ್ತು ಗುರುತಿಸಿರುವ ಸಮಸ್ಯೆಗೆ ಮಾನವ ಕೇಂದ್ರಿತ ಪರಿಹಾರಕ್ಕೆ ಸಲಹೆಗಳನ್ನು ಕಲೆ ಹಾಕುವುದು

## ಹೇಗೆ:

1. ಸರಪಂಚರಿಗೆ ಮತ್ತೂ ಏನಾದರೂ ಹೇಳಲು ಇದೆಯೇ ಎಂದು ತರಗತಿಯಲ್ಲಿ ಕೇಳುವುದು

2. ಆ ಗುಂಪುಗಳು ಈಗ ಸಮುದಾಯ ಭವನಕ್ಕೆ ಹೋಗಿ ಅವರಲ್ಲೊಬ್ಬರು ಸೋಫಿಯಾಳ ಪಾತ್ರವನ್ನು ಮಾಡಬೇಕು ಎಂದು ಹೇಳುವುದು. ಮಕ್ಕಳು ತಮ್ಮ ವಾದವನ್ನು ಸಮರ್ಥವಾಗಿ ಮಂಡಿಸಿ ಕೊಳವು ಚೊಕ್ಕಟವಾಗುವಂತೆಯೂ ಮತ್ತು ನೀರು ಸುರಕ್ಷಿತವಾಗುವಂತೆಯೂ ಮಾಡಬೇಕು ಎಂದು ಹೇಳುವುದು.

## ರಂಗಭೂಮಿ ಚಟುವಟಿಕೆಯ ಮೂಲಕ ಪರಿಹಾರವನ್ನು ಹುಡುಕುವುದು

ಮಕ್ಕಳೆಲ್ಲ ಕುಳಿತಾದ ನಂತರ ಶಿಕ್ಷಕಿಯು ತಲೆಗೆ ಪೇಟವನ್ನು ಧರಿಸಿ ಸರಪಂಚರ ಪಾತ್ರವನ್ನು ವಹಿಸಿಕೊಂಡರು. ಶಿಕ್ಷಕಿಯು ಕುರ್ಚಿಯ ಮೇಲೆ ಕುಳಿತು "ನಿಮ್ಮೆಲ್ಲರಿಗೂ ಸಮುದಾಯ ಭವನಕ್ಕೆ ಸ್ವಾಗತ. ಇವತ್ತಿನ ಸಭೆಯಲ್ಲಿ ನಾವು ನಮ್ಮ ಹಳ್ಳಿಯ ಕೊಳದ ಬಗ್ಗೆ ಮಾತನಾಡಬೇಕಾಗಿದೆ. ನೀವೆಲ್ಲ ಈಗ ನಿಮ್ಮ ಆತಂಕಗಳನ್ನು ತಿಳಿಸಿ". ಎಂದು ಹೇಳಿದರು.ಮಕ್ಕಳು ಸಮಸ್ಯೆಗಳ ಬಗ್ಗೆ ಮಾತನಾಡಿದರು. ಸರಪಂಚರು ಗುಂಪಿನ ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತಿದೆಯೇ ಎಂಬುದನ್ನು ಗಮನಿಸಿಕೊಳ್ಳುತ್ತಾ ಆಲಿಸಿದರು. ಮಕ್ಕಳು ಮಂಡಿಸಿದ ಕೆಲವು ಮುಖ್ಯ ಅಂಶಗಳು ಹೀಗಿವೆ:

1. ಬೇರೊಂದು ಸ್ಥಳದಲ್ಲಿ ಕಸದ ತೊಟ್ಟಿಯನ್ನು ಇಡಬೇಕು, ಆಗ ನಾವು ಅಲ್ಲಿ ಕಸವನ್ನು ಸುರಿಯಬಹುದು.

2. ಕೊಳವನ್ನು ಚೊಕ್ಕಟಗೊಳಿಸಬೇಕು, ಇಲ್ಲದಿದ್ದರೆ ನಮ್ಮ ಜಾನುವಾರುಗಳು ಸಾಯುತ್ತವೆ.

3. ಕೊಳದ ನೀರನ್ನು ಚೊಕ್ಕಟಗೊಳಿಸಲು ಮತ್ತೂ ಒಂದು ಕಾರಣವಿದೆ: ನಮ್ಮ ಜಾನುವಾರುಗಳು ಆ ನೀರನ್ನು ಕುಡಿಯುತ್ತವೆ, ನಾವು ಆ ಪ್ರಾಣಿಗಳ ಹಾಲನ್ನು ಕುಡಿಯುತ್ತೇವೆ.

ಕೊನೆಗೂ ಸರಪಂಚರು ಕೊಳವನ್ನು ಚೊಕ್ಕಟಗೊಳಿಸಲು ಒಪ್ಪಿಗೆ ನೀಡುತ್ತಾ, "ಕೊಳವನ್ನು ಚೊಕ್ಕಟಗೊಳಿಸಲು ಸೂಕ್ತ ಸಿದ್ಧತೆಗಳನ್ನು ನಾನು ಮಾಡುತ್ತೇನೆ, ಮತ್ತೊಂದು ಕೆಲಸದ ನಿಮಿತ್ತ ನಾನೀಗ ಹೊರಡಬೇಕಾಗಿದೆ" ಎಂದು ಹೇಳಿ, ಸರಪಂಚರು ಕುರ್ಚಿಯಿಂದ ಎದ್ದು ತರಗತಿಯಿಂದ ಹೊರ ನಡೆದರು ಮತ್ತು ಶಿಕ್ಷಕಿಯಾಗಿ ಒಳ ಬಂದರು. ಈ ರೀತಿ ಪಾತ್ರಗಳನ್ನು ನಿರ್ವಹಿಸುವ ಮೂಲಕ ತರಗತಿಯಲ್ಲಿ ಶಿಕ್ಷಕಿ ಮತ್ತು ಮಕ್ಕಳ ನಡುವಿನ ಸಂಬಂಧವು ಗಟ್ಟಿಗೊಂಡಿತು. ಅವರು ಮುಕ್ತವಾಗಿ ಮಾತನಾಡಲು ಸಾಧ್ಯವಾಯಿತು. ಕೆಲವು ಮಕ್ಕಳು, ಕೊಳವು ಚೊಕ್ಕಟವಾಗದಿದ್ದರೆ ಕೃಷಿ ಕಾಲುವೆಗಳಲ್ಲಿ ಅಡೆತಡೆ ಉಂಟಾಗಿ ಹೊಲಗದ್ದೆಗಳಿಗೆ ನೀರು ಹರಿಯುವುದಿಲ್ಲ ಹಾಗೂ ದೂರದಿಂದ ನೀರನ್ನು ತರುವಷ್ಟು ಹಣ ತಮ್ಮಲ್ಲಿಲ್ಲ ಎಂದರು. ಮತ್ತೊಂದು ಮಗುವು, ಕಸವನ್ನು ಹಾಕುವುದರಿಂದ ಕೊಳವು ಸಂಪೂರ್ಣವಾಗಿ ಅನುಪಯೋಗಿ ಆಗುವುದಲ್ಲದೆ ಅಂತರ್ಜಲದ ಗುಣಮಟ್ಟವೂ ಕುಸಿಯುತ್ತದೆ ಎಂದು ಹೇಳಿತು. ಎಲ್ಲರೂ 'ಹಾಗಾದರೆ ನಾವು ಏನು ಮಾಡುವುದು? ನಮ್ಮ ಪ್ರಾಣಿಗಳು ನೀರು ಕುಡಿಯಲು ಎಲ್ಲಿಗೆ ಹೋಗಬೇಕು?' ಎಂದು ಕೇಳಿದರು.

ಈ ರಂಗ ಪ್ರಕ್ರಿಯೆಯಲ್ಲಿ ಮಕ್ಕಳು ಈ ಹಿಂದಿನಂತೆಯೇ ಭಾಗವಹಿಸುತ್ತಿದ್ದರಾದರೂ, ಕೆಲವು ಮಕ್ಕಳು ಇತರರಿಗಿಂತ ಹೆಚ್ಚು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಆದರೆ ಸಂವಾದದಲ್ಲಿ ಸೋಫಿಯಾಳ ಪಾತ್ರವನ್ನು ಒಳಗೊಳ್ಳಲು ವಿಫಲವಾದೆವು. ಅದು ಇದ್ದಿದ್ದರೆ ಸರಪಂಚರೊಡನೆಯ ಸಂವಾದವು ಮತ್ತಷ್ಟು ಪರಿಣಾಮಕಾರಿಯಾಗಿರುತ್ತಿತ್ತು.

## ಅನುಪಾಲನೆ

ಹಳ್ಳಿಯ ಸರಪಂಚನ ಕರ್ತವ್ಯಗಳನ್ನು ಶಿಕ್ಷಕಿಯು ಕಪ್ಪುಹಲಗೆಯ ಮೇಲೆ ಬರೆದರು. ಸರ್ಕಲ್ ಟೈಮಿನ (Circle Time) ಸಂವಾದದಲ್ಲಿ ಕೊಳವನ್ನು ಹಳ್ಳಿಗರ ಸಹಾಯದಿಂದ ಹೇಗೆ ಚೊಕ್ಕಟಗೊಳಿಸುವುದು ಎಂದು ಚರ್ಚೆ ನಡೆಯಿತು. ಮಕ್ಕಳು ಅವರ ಚಿಂತನೆಗಳನ್ನು ಮತ್ತು ಅಂತಿಮ ತೀರ್ಮಾನಗಳನ್ನು ಬರೆಯಲು ಸಹಾಯ ಮಾಡುವ ಮೂಲಕ ಶಿಕ್ಷಕರು ಇಡೀ ಪ್ರಕ್ರಿಯೆಯಲ್ಲಿ ಮಕ್ಕಳಿಗೆ ಬೆಂಬಲ ನೀಡಿದರು.

## ಪರಿಣಾಮಕಾರಿತ್ವದ ಪರ್ಯಾಲೋಚನೆ

ಸಂವಾದಗಳ ಮೂಲಕ ಹಳ್ಳಿಯ ಸರಪಂಚರ ಜವಾಬ್ದಾರಿಗಳು ಏನು ಎಂಬುದನ್ನು ಮಕ್ಕಳು ತಿಳಿದುಕೊಳ್ಳಲು ಸಾಧ್ಯವಾಯಿತು. ಎಷ್ಟೋ ಮಕ್ಕಳಿಗೆ ಸರಪಂಚರು ಯಾರು ಎಂಬುದೇ ತಿಳಿದಿಲ್ಲದಿದ್ದರೂ, ಅವರಿಗೆ ಇತರ ಎಷ್ಟೋ ಜವಾಬ್ದಾರಿಗಳು ಇವೆ ಎಂಬುದನ್ನು ತಿಳಿಯಲು ಸಾಧ್ಯವಾಯಿತು: ಉದಾಹರಣೆಗೆ, ಹಳ್ಳಿಗರಿಗೆ ಆಧಾರ್ ಕಾರ್ಡ್‌ಗಳನ್ನು ವ್ಯವಸ್ಥೆ ಮಾಡುವುದು

ಇತ್ಯಾದಿ.

ಅವರು ತಯಾರಿಸಿದ ಪಟ್ಟಿಯನ್ನು ಮುಂದೇನು ಮಾಡುವುದು ಎಂದು ಮಕ್ಕಳೊಡನೆ ಚರ್ಚೆ ನಡೆಸಿದೆವು. ಕೆಲವರು ಅದನ್ನು ಸರಪಂಚರಿಗೆ ಕೊಡುವುದಾಗಿ ಹೇಳಿದರೆ ಉಳಿದವರು ಇಟ್ಟುಕೊಳ್ಳಬೇಕು ಎಂದು ಬಯಸಿದರು. ಮತ್ತೂ ಕೆಲವರು ತಮ್ಮ ಮನೆಯ ಕಸವನ್ನು ತೆಗೆದುಕೊಂಡು ಸರಿಯಾದ ಜಾಗದಲ್ಲಿ ವಿಲೇವಾರಿ ಮಾಡುವುದಾಗಿ ಹೇಳಿದರು.

ಈ ಚಟುವಟಿಕೆಯ ಮುಂದುವರಿಕೆಯಾಗಿ ಹಳ್ಳಿಯಲ್ಲಿನ ನೀರಿನ ವ್ಯವಸ್ಥೆ ಮತ್ತು ನೀರಿನ ಸರಬರಾಜು ಇದರ ಬಗ್ಗೆ ಚರ್ಚೆ ಮಾಡಬಹುದು. ಅದರಲ್ಲೂ ಮುಖ್ಯವಾಗಿ 4ನೇ ತರಗತಿಯಲ್ಲಿ; ಇದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನೀರು ತರುವುದು ಮತ್ತು ಲಿಂಗ ಸಂವೇದನೆ ಹಾಗೂ ಮನೆಯಲ್ಲಿ ನೀರಿನ ಅಮೂಲ್ಯತೆ ಮುಂತಾದವುಗಳ ಬಗ್ಗೆ ಚಟುವಟಿಕೆಗಳನ್ನು ಮಾಡಬಹುದು.

## ಉಪಸಂಹಾರ

ಸಾಮಾನ್ಯವಾಗಿ ಮಕ್ಕಳು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲು ಶಾಲಾ ವಾತಾವರಣ ಮತ್ತು ತರಗತಿಯ ಕಲಿಕಾ ಪ್ರಕ್ರಿಯೆಯಲ್ಲಿ ಹಿಂಜರಿಯುತ್ತಾರೆಂದು ನಮ್ಮ ನಿಯಮಿತ ಶಾಲಾ ಭೇಟಿಗಳಲ್ಲಿ ಕಂಡುಕೊಂಡಿದ್ದೆವು. ಹಾಗಾಗಿ ಅನಿಸಿಕೆಗಳನ್ನು ಹಂಚಿ–ಕೊಳ್ಳುವುದು ಮತ್ತು ಪರಿಹಾರಗಳನ್ನು ಹುಡುಕುವುದು ಇಂತಹವು ಉಪೇಕ್ಷಿಸಲ್ಪಡುತ್ತವೆ ಮತ್ತು ಇದೇ ಗುಣವು ಮಕ್ಕಳ ಮೂಲ ಪ್ರಕೃತಿ ಅಥವಾ ಸ್ವಭಾವದಲ್ಲಿ ಊರಿಬಿಡುತ್ತದೆ. ಒಂದು ಮಗುವು ತನ್ನ ಸುತ್ತಲಿನ ಪರಿಸರದೊಳಗಿನ ಆತ್ಮೀಯ ಸಂಬಂಧವನ್ನು ಮತ್ತೆಮತ್ತೆ, ಬೇರೆಬೇರೆ ಬಗೆಯಲ್ಲಿ ಅನ್ವೇಷಿಸುತ್ತಲೇ ಇರಬೇಕು. ಆಗ ಮಾತ್ರ ಒಂದು ಮಗು ಉತ್ತಮ ಪ್ರಜೆಯಾಗಿ ತನ್ನ ಸುತ್ತಲಿನ ಪರಿಸರದೊಡನೆಯ ಸಂಬಂಧವನ್ನು ಕಂಡುಕೊಂಡು ಅದನ್ನು ರಕ್ಷಿಸಲು ಸಾಧ್ಯವಾಗುತ್ತದೆ.



**ರಾಜ್‌ಕುಮಾರ್ ರಜಕ್** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್, ಟೋಂಕ್‌ನಲ್ಲಿ ಶಿಕ್ಷಣದಲ್ಲಿ ರಂಗ ಚಟುವಟಿಕೆಯ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಅವರು ಒಬ್ಬ ರಂಗಕರ್ಮಿ – ನಾಟಕಕಾರ ಮತ್ತು ನಟ. ಹಲವಾರು ರಾಜ್ಯಗಳ ಅನೌಪಚಾರಿಕ ಕಲಿಕಾ ಸಮುದಾಯಗಳಲ್ಲಿ ಮತ್ತು ವಸತಿಹೀನ ಮಕ್ಕಳು ಮತ್ತು ಯುವಕರು, ಬಾಲ ಕಾರ್ಮಿಕರು, ಬಾರ್ ನರ್ತಕಿಯರು, ಲೈಂಗಿಕ ಕಾರ್ಯಕರ್ತೆಯರು ಇಂತಹವರ ಗುಂಪುಗಳಲ್ಲಿ ಸಾಮಾಜಿಕ ಅಭಿವೃದ್ಧಿ ಮತ್ತು ಸಂಘರ್ಷ ನಿರ್ವಹಣೆಯ ಬಗ್ಗೆ ಕೆಲಸ ಮಾಡುತ್ತಾರೆ. ಇವರು ನಾಟಕ ನಿರ್ಮಾಣಕ್ಕೆ ಬೆಂಗಳೂರಿನ ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್ ಮತ್ತು ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ ಇವುಗಳಿಂದ ಅನುದಾನವನ್ನು ಪಡೆದಿದ್ದಾರೆ. ಇನ್‌ಲಾಕ್ ಫೌಂಡೇಷನ್, ಮುಂಬೈನ ರಂಗ ಪ್ರಶಸ್ತಿ ಪುರಸ್ಕೃತರಾಗಿರುವ ರಜಕ್ ಅವರು ಹೈದರಾಬಾದಿನ ಕೇಂದ್ರೀಯ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರಾಗಿದ್ದಾರೆ (ಶಿಕ್ಷಣದಲ್ಲಿ ರಂಗ ಚಟುವಟಿಕೆ). ಇವರನ್ನು rajkumar.rajak@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಜನಾರ್ದನ ಸಿ.ಎಸ್.** | ಪರಿಶೀಲನೆ: **ನಾಗಮಣಿ ಎಸ್.ಎನ್.**